**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**
**ಬೆಂಗಳೂರು ಗ್ರಾಮಾಂತರ ಜಿಲ್ಲೆ**

**ಎಸ್.ಸಿ. ನಂಃ 10023/2018**

**ಚಾಸಾ ಃ 10**

**ಪ್ರಾಸಾ ಃ 12**

| | | |
|---|---|---|
| **ಹೆಸರು** | **ಃ** | **ರಮೇಶ** |
| **ತಂದೆಯ ಹೆಸರು** | **ಃ** | **ಮುನಿಯಪ್ಪ** |
| **ವಯಸ್ಸು** | **ಃ** | **30 ವರ್ಷ** |
| **ವೃತ್ತಿ** | **ಃ** | **ಚಾಲಕ** |
| **ವಾಸ** | **ಃ** | **ಮೇಡೆಹಳ್ಳಿ ಗ್ರಾಮ** |

**ಈ ದಿನ ದಿನಾಂಕಃ 20.01.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ ಃ**

1. ಆರೋಪಿತರು ನನಗೆ ಗೊತ್ತಿರುವುದಿಲ್ಲ ಮತ್ತು ನೋಡಿರುವುದಿಲ್ಲ. ಚಾಸಾ-1 ಮತ್ತು 2 ಸಹ ಗೊತ್ತಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಏನೂ ಮಾಹಿತಿ ಇರುವುದಿಲ್ಲ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಈಗ ನೋಡುತ್ತಿರುವ ಸಹಿ ನನ್ನದಿರುತ್ತದೆ. ಸದರಿ ಸಹಿಯನ್ನು ದೊಡ್ಡಬಳ್ಳಾಪುರದ ನಗರ ಪೋಲೀಸ ಠಾಣೆಯಲ್ಲಿ ಮಾಡಿರುತ್ತೇನೆ. ಸದರಿ ದಾಖಲೆಯನ್ನು ಈಗಾಗಲೆ ನಿಪಿ-11 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-11 (ಬಿ) ಎಂದು ಗುರುತಿಸಲಾಯಿತು. ನಿಪಿ-11 ರಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ ಮತ್ತು ನನಗೆ ಓದಿ ಹೇಳಿರುವುದಿಲ್ಲ ಹಾಗೂ ನನ್ನ ಸಮಕ್ಷಮದಲ್ಲಿ ಯಾವುದೇ ಸ್ವತ್ತನ್ನು ಅಮಾನತುಪಡಿಸಿಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ ಃ**

2. ದಿನಾಂಕಃ 22.11.2016 ರಂದು ಠಾಣೆಗೆ ಬಂದಾಗ ಪೋಲೀಸರು ಪ್ರಕರಣದ 1 ನೇ ಆರೋಪಿಯನ್ನು ತೋರಿಸಿ ಈ ಪ್ರರಕಣದ ಬಗ್ಗೆ ಮಾಹಿತಿಯನ್ನು ನೀಡಿ ಸದರಿ ಆರೋಪಿಯ ಮಾಹಿತಿಯಂತೆ ಅವರು ತೋರಿಸುವ ಸ್ಥಳಕ್ಕೆ ಹೋಗಿ ಮಹಜರ್ ಮಾಡಬೇಕಾಗುತ್ತದೆಂದು ಅದಕ್ಕೆ ಸಹಕರಿಸಿ ಎಂದು ಪೋಲೀಸರು ನನಗೆ ಹೇಳಿರುತ್ತಾರೆಂದರೆ ಸರಿಯಲ್ಲ. ಅದರಂತೆ 1 ನೇ ಆರೋಪಿಯು ನನ್ನನ್ನು, ಮತ್ತೊಬ್ಬ ಸಾಕ್ಷಿದಾರರಾದ ಚಾಸಾ-9 ಚಂದ್ರಶೇಖರ್ ಮತ್ತು ಪೋಲೀಸರನ್ನು ದೊಡ್ಡಬಳ್ಳಾಪುರದ ರೈಲ್ವೆ ಸ್ಟೇಷನ ಹತ್ತಿರ ಕರೆದುಕೊಂಡು ಹೋಗಿರುತ್ತಾನೆ ಮತ್ತು ಸದರಿ ರೈಲ್ವೆ ಸ್ಟೇಷನ ಬ್ರಿಡ್ಜ್ ಪಕ್ಕದಲ್ಲಿರುವ ಕಾಡು ಜಾತಿಯ ಮರದ ಕೆಳಗೆ ಅಲ್ಲಿ ದೊಡ್ಡ ಸಿಮೆಂಟ್ ಕಾಂಕ್ರೆಟ್ ದಿಂಡುಗಳನ್ನು ತೊರಿಸಿ ಸದರಿ ದಿಂಡುಗಳ ಸಂದಿಯಲ್ಲಿ ಇಟ್ಟಿದ್ದ ಆಯುಧಗಳಾದ ಚಾಕು, ಮತ್ತು ಪೈಪ್‌ನ್ನು ತೆಗೆದು ಪೋಲೀಸರಿಗೆ ಕೊಟ್ಟಿರುವುದನ್ನು ಪೋಲೀಸರು ಸ್ಥಳದಲ್ಲಿ ಮಹಜರ್ ಬರೆದು ಅಮಾನತ್ತುಪಡಿಸಿಕೊಂಡು ಅದರಲ್ಲಿ ಬರೆದ ವಿಚಾರವನ್ನು ನನಗೆ ಓದಿ ಹೇಳಿ ಸಹಿ ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ.

3. ಆಗ ಸಮಯ ಮದ್ಯಾಹ್ನ 01.00 ರಿಂದ 01.45 ಗಂಟೆ ಆಗಿತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಈಗ ನ್ಯಾಯಾಲಯದಲ್ಲಿ ನೋಡುತ್ತಿರುವ ಮು.ಮಾ. 1 ಮತ್ತು 2 ನ್ನು ಅಮಾನತ್ತುಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ನಾನು ಹೇಳಿಕೆ

ನೀಡಿರುತ್ತೇನೆಂದರೆ ಸರಿಯಲ್ಲ, ಸದರಿ ಹೇಳಿಕೆಯನ್ನು ನಿಪಿ- 16 ಎಂದು ಗುರುತಿಸಲಾಯಿತು. ಆರೋಪಿತರು ಗೊತ್ತಿದ್ದರೂ ಸಹ ಮತ್ತು ನನ್ನ ಸಮಕ್ಷಮದಲ್ಲಿ ಮಹಜರ್ ಬರೆದು ಮು.ಮಾ. 1 ಮತ್ತು 2 ನ್ನು ಅಮಾನತ್ತುಪಡಿಸಿಕೊಂಡಿದ್ದರೂ ಸಹ ಮತ್ತು ಈಗ ಓದಿ ಹೇಳಿದಂತೆ ಹೇಳಿಕೆಯನ್ನು ನೀಡಿದ್ದರೂ ಸಹ, ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ ಃ**

ಆರೋಪಿ ಪರ ವಕೀಲರನ್ನು ಕರೆಸಲಾಯಿತು, ಗೈರು ಹಾಜರಿರುತ್ತಾರೆ, ಯಾರೂ ಪ್ರತಿನಿಧಿಸಿರುವುದಿಲ್ಲ, ಆದ್ದರಿಂದ ಪಾಟೀ ಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು.

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ